

# ಹಲವು ದಾರಿಗಳ ಕೂಡುನೋಟ

■ ಗೌರಿ

**ಮನೋರಂಜನೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡ ಸಣ್ಣ ಕಥೆಯೊಂದನ್ನು ಹೆಣ್ಣಿನ ಒಳಬದುಕಿನ ಸೂಕ್ಷ್ಮಲೋಕವನ್ನು ಕಾಣಿಸಲೂ ಬಳಸಿಕೊಂಡಿರುವುದು ಈ ಕಿರುಚಿತ್ರದ ವಿಶೇಷ.**

ಹಾರರ್, ಸೈಕಾಲಾಜಿಕಲ್ ಥ್ರಿಲ್ಲರ್, ಫ್ಯಾಮಿಲಿ ಡ್ರಾಮ, ಹ್ಯೂಮರ್ ಹೀಗೆ ಸಿನಿಮಾದ ಹಲವು ಪ್ರಕಾರಗಳನ್ನು ಎರಕಹೊಯ್ದು ರೂಪಿಸಿದ ಹಾಗಿದೆ ಸುಹೇಲ್ ತಟಾರಿ ನಿರ್ದೇಶನದ ಕಿರುಚಿತ್ರ ‘ಮನೋರಂಜನ್’. ಹೀಗೆ ಹಲವು ಜಾನರ್‌ಗಳನ್ನು ಎರಕ ಹೊಯ್ದಿರುವ ರೀತಿ ಮತ್ತು ಅದು ಚಿತ್ರದ ಓಟಕ್ಕಾಗಲಿ, ಒಟ್ಟಾರೆ ಅನುಭವಕ್ಕಾಗಲಿ ತಡೆಯಾಗದ ಹಾಗೆ ಸಹಜವಾಗಿ ಹೊಂದಿಕೊಂಡಿರುವ ಬಗೆ ಈ ಚಿತ್ರದ ಕುರಿತು ಕುತೂಹಲ ಹುಟ್ಟುವಂತೆ ಮಾಡುತ್ತದೆ.

ಇಲ್ಲಿ ಒಂದು ಟ್ರ್ಯಾಜಿಡಿಯ ದಟ್ಟ ನೆನಪು ಇದೆ. ಮತ್ತು ಆ ಟ್ರ್ಯಾಜಿಡಿಯನ್ನೇ ಇಟ್ಟುಕೊಂಡು ಒಂದು ಭ್ರಮಾಜಗತ್ತನ್ನು ಸೃಷ್ಟಿಸುವ ತುಂಟತನವೂ ಇದೆ. ಅದನ್ನು ತುಂಟತನ ಎನ್ನಬೇಕೋ, ತನ್ನ ಸಣ್ಣ ಆಸೆಯೊಂದು ಈಡೇರುವ ಬಾಗಿಲುಗಳು ಸತತವಾಗಿ ಮುಚ್ಚಿಕೊಂಡಾಗ ಉಂಟಾಗುವ ಹತಾಶೆಯಿಂದ ಹೊರಬರುವ ದಾರಿಯನ್ನು ಹುಡುಕಿಕೊಳ್ಳುವ ಅನಿವಾರ್ಯ ಪ್ರಯತ್ನ ಎನ್ನಬೇಕೋ ಹೇಳುವುದು ಕಷ್ಟ. ಈ ಎರಡೂ ಒಂದರೊಳಗೊಂದು ಬೆಸೆದ ರೀತಿಯೇ ಈ ಕಿರುಚಿತ್ರದ ಆವರಣವನ್ನು ನಿರ್ಮಾಣ ಮಾಡಿದೆ.

ನಟಿ ಗುಲ್ ಪನಾಗ್ ಈ ಕಿರುಚಿತ್ರದ ಕಥೆಯನ್ನು ಬರೆದು ನಿರ್ಮಾಣ ಮಾಡಿದ್ದಾರೆ. ಮುಖ್ಯಪಾತ್ರದಲ್ಲಿಯೂ ನಟಿಸಿದ್ದಾರೆ. ಈ ಕಥೆ ಅವರಿಗೆ ಹೊಳೆದಿದ್ದು ಲಾಕ್‌ಡೌನ್ ಸಮಯದಲ್ಲಿಯಂತೆ. ಮನೆಯಲ್ಲಿಯೇ ಕಾಲಕಳೆಯುವ ಗೃಹಿಣಿಯೊಬ್ಬಳ ಬದುಕನ್ನೂ, ಒಳಬದುಕನ್ನೂ ಕಾಣಿಸುವ ಪ್ರಯತ್ನ ಈ ಕಥೆಯಲ್ಲಿದೆ.

ಹೆಸರು: ಮನೋರಂಜನ್
ಭಾಷೆ: ಹಿಂದಿ
ನಿರ್ಮಾಣ: ಗುಲ್ ಪನಾಗ್
ನಿರ್ದೇಶನ: ಸುಹೇಲ್ ತಟಾರಿ
ಸಂಕಲನ: ರಾಹುಲ್ ಕುಮಾರ್ ಸಿಂಗ್, ಪ್ರಣೀತ್ ಜಸ್ವಾಲ್
ಛಾಯಾಗ್ರಹಣ: ಅಕ್ಷಯ್ ಸಿಂಗ್
ತಾರಾಗಣ: ಗುಲ್ ಪನಾಗ್, ಸತ್ಯಜಿತ್ ಶರ್ಮಾ, ಮಿಹಿರ್ ಅಹುಜಾ, ಅಕ್ಷಿತಾ ಅರೋರಾ

ಲಲಿತಾ ಸ್ಟೇಷನ್ ಮಾಸ್ಟರ್‌ನ ಹೆಂಡತಿ. ಅವಳ ಬದುಕಿನಲ್ಲೊಂದು ದುರಂತವಿದೆ. ಆ ದುರಂತ ಏನು ಎಂಬುದು ಆರಂಭದಲ್ಲಿ ಜಾಹೀರಾಗುವುದಿಲ್ಲ. ಈಗ ಸ್ಟೇಷನ್ ಮಾಸ್ಟರ್‌ಗೆ ರಜೆ ಸಿಕ್ಕಿದೆ. ಈ ರಜೆಯಲ್ಲಿ ಒಂದು ಸ್ಥಳಕ್ಕೆ ಪ್ರವಾಸಕ್ಕೆ ಹೋಗಲು ಗಂಡ–ಹೆಂಡತಿ ನಿರ್ಧರಿಸಿದ್ದಾರೆ. ಅದಕ್ಕಾಗಿ ಹೆಂಡತಿ ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡಿದ್ದಾಳೆ. ಆದರೆ ನಾಳೆ ಪ್ರವಾಸಕ್ಕೆ ಹೋಗಬೇಕು ಎನ್ನುವಾಗ ಈವತ್ತು ಗಂಡನ ಸ್ನೇಹಿತನ ಮಗ ಮನೆಗೆ ಬರುತ್ತಾನೆ ಎಂಬ ವಿಷಯ ತಿಳಿಯುತ್ತದೆ. ಹಾಗಾಗಿ ಗಂಡ ಪ್ರವಾಸವನ್ನು ರದ್ದುಗೊಳಿಸಿ ಸ್ನೇಹಿತನ ಮಗನಿಗೆ ಆತಿಥ್ಯ ವಹಿಸಲು ಸಿದ್ಧನಾಗುತ್ತಾನೆ. ಹೆಂಡತಿಗೆ ಇದು ತೀವ್ರ ನೋವು ಹುಟ್ಟಿಸುತ್ತದೆ. ಆದರೆ ಅವಳ ಮಾತನ್ನು ಗಂಡ ಕೇಳುವುದಿಲ್ಲ.

ಹಾಗಾಗಿ ಮರುದಿನ ಗಂಡನ ಸ್ನೇಹಿತನ ಮಗ ಮನೆಗೆ ಬಂದಾಗ ಹೆಂಡತಿ ಒಂದು ಭ್ರಮೆಯ ಲೋಕವನ್ನು ಸೃಷ್ಟಿಸುತ್ತಾಳೆ. ಭ್ರಮೆಯ ಲೋಕವೆಂದರೆ ಭೌತಿಕವಾಗಿ ರೂಪಿಸುವುದಲ್ಲ. ಮಾತಿನಲ್ಲಿಯೇ ಹುಟ್ಟಿಸುವ ಭ್ರಮೆಯ ಲೋಕ. ಆ ಲೋಕ ಎಂಥದ್ದು? ಅದರಿಂದ ಹೆಂಡತಿ ತನ್ನ ಗುರಿಯನ್ನು ಹೇಗೆ ಸಾಧಿಸಿಕೊಳ್ಳುತ್ತಾಳೆ ಎನ್ನುವುದೇ ಈ ಕಿರುಚಿತ್ರದ ತಿರುಳು.

ಈ ಕಿರುಚಿತ್ರದ ಕಥೆಯ ಎಳೆಯಲ್ಲಿ ಕೆಲವು ಭಾಗವನ್ನು ಮೊದಲೇ ಊಹಿಸಿಕೊಳ್ಳಬಹುದಾದರೂ ಅದು ನೋಡುವ ಕುತೂಹಲವನ್ನೇನೂ ಕುಗ್ಗಿಸುವುದಿಲ್ಲ. ಸಣ್ಣದಾದ ಕಥೆಯೊಂದನ್ನು ಆಸಕ್ತಿಕರವಾಗಿ ಹೇಳುವ ‘ಕ್ರಿಸ್ಪಿ’ ಗುಣ, ತಿರುವುಗಳು, ನಟನೆಯ ಬೆಂಬಲ ಎಲ್ಲವೂ ಇಲ್ಲಿದೆ. ಇದರಲ್ಲಿ ಚಿತ್ರಕಥೆ ಬರೆದಿರುವ ಶುಭ್‌ಮಣಿ ಸಡಾನ್ ಅವರ ಕೊಡುಗೆ ದೊಡ್ಡದಿದೆ. ಹಾಗಾಗಿಯೇ ಈ ಕಿರುಚಿತ್ರ ಒಂದು ಒಳ್ಳೆಯ ಅನುಭವವನ್ನೂ ಕೊಡುತ್ತದೆ. ಮೇಲುನೋಟಕ್ಕೆ ತುಸು ಹಾಸ್ಯದ ಕ್ಲೈಮ್ಯಾಕ್ಸ್ ಹೊಂದಿರುವ ಈ ಕಿರುಚಿತ್ರಕ್ಕೆ ಗಾಢವಾದ ವಿಷಾದದ, ದುಃಖದ ಭಾವನೋಟವೂ, ಹೆಣ್ಣಿನ ಬದುಕಿನ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ಒಳನೋಟವೂ ಇದೆ. ಮನರಂಜನೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡೂ ಸೂಕ್ಷ್ಮವಾದ ಸಂಗತಿಗಳನ್ನು ಹೇಗೆ ಹೇಳಬಹುದು ಎಂಬುದನ್ನು ಈ ಕಿರುಚಿತ್ರದಲ್ಲಿ ನೋಡಬಹುದು.

ಕಿರುಚಿತ್ರ ವೀಕ್ಷಣೆಗೆ https://bit.ly/3vKcSRx ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.